ಸಾಕ್ಷಿಯನ್ನು ದಿ.30.09.2019 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಪರ್ಸನಲ್ ಲೋನ್ ಅಗ್ರೀಮೆಂಟ್‌ನ್ನು ಹಾಜರುಪಡಿಸಿದ್ದು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು, ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ನಿಪಿ.4 ಎಂದು, ಅಗ್ರೀಮೆಂಟ್ ಆಫ್ ಲೀಸ್‌ನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು, ಆರೋಪಿಗೆ ನಾಲ್ಕು ಲಕ್ಷ ರೂ ಹಣವನ್ನು ನೀಡಿರುವ ಬಗ್ಗೆ ಬ್ಯಾಂಕ್‌ನ ಸ್ಟೇಟ್‌ಮೆಂಟ್‌ನ್ನು ನಿಪಿ.6 ಎಂದು, ಆರೋಪಿಗೆ 2 ಲಕ್ಷ ರೂ ಹಣವನ್ನು ನೀಡಿರುವ ಬಗ್ಗೆ ಬ್ಯಾಂಕ್‌ನ ತಃಖ್ತೆಯನ್ನು ನಿಪಿ.7 ಎಂದು, ನನಗೆ ಸಂಬಂಧಪಟ್ಟ ಐಟಿ ರಿಟರ್ನ್ಸ್‌ನ್ನು ನಿಪಿ.8 ಎಂದು, ನನಗೆ ಹಾಗೂ ಆರೋಪಿಗೆ ಸಂಬಂಧಪಟ್ಟ ಕುಂಭಕೋಣಂ ಟ್ರೆಡಿಶನಲ್ ಕಾಫಿ ಎಂಬ ಸಂಸ್ಥೆಗೆ ಸೇರಿದ ಆಹ್ವಾನ ಪತ್ರಿಕೆಯನ್ನು ನಿಪಿ.9 ಎಂದು, ಅದೇ ರೀತಿ ಸದರಿ ಕಂಪನಿಗೆ ಸೇರಿದ ಫಾರ್ಮ್ ನಂಬರ್ ಸಿ ಯನ್ನು ನಿಪಿ.10 ಎಂದು, ಅದೇ ರೀತಿ ಆರೋಪಿಗೆ ಸಾಲವಾಗಿ ನೀಡಿರುವ ಬಗ್ಗೆ ಬ್ಯಾಂಕ್‌ನ ತಃಖ್ತೆಯನ್ನು ನಿಪಿ.11 ಎಂದು, ಅದೇ ರೀತಿ ಆರೋಪಿ ನನ್ನಿಂದ ಎರಡು ಲಕ್ಷ ರೂ ಹಣವನ್ನು ಪಡೆದುಕೊಂಡ ಬಗ್ಗೆ ಬ್ಯಾಂಕ್‌ನ ಸ್ಟೇಟ್‌ಮೆಂಟ್‌ನ್ನು ನಿಪಿ.12 ಎಂದು, ದಿನಪತ್ರಿಕೆಯ ಪ್ರಕಟಣೆಯನ್ನು ನಿಪಿ.13 ಎಂದು, ಆರೋಪಿ ಕಳುಹಿಸಿದ ಮೇಲ್ ಹಾಗೂ ಅಫಿಡವಿಟ್‌ನ್ನು ನಿಪಿ.14 ಎಂದು, ಸದರಿ ಇಂಟೀರಿಯರ್‌ನವರು ನೀಡಿರುವ ಮೌಲ್ಯವರ್ಧಿತ ವರದಿಯನ್ನು ನಿಪಿ.15 ಎಂದು, ಆರೋಪಿಯು ನನಗೆ ನೀಡಿರುವ ನೋಟೀಸ್‌ನ ನಕಲನ್ನು ನಿಪಿ.16 ಎಂದು ಗುರುತಿಸಲಾಯಿತು.

(ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗೆಂದು ಮುಂದೂಡಲಾಯಿತು.)

**ಪಿಡಬ್ಲ್ಯೂ: 1**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ